ಇಂದು ದಿಃ **01.04.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎ ಎಸ್ ಶಿಂಧೆ ವಕೀಲರಿಂದ</u>

1. 1 ನೇ ಆರೋಪಿ ತಂದು ಕೊಟ್ಟ ನೋಕಿಯಾ ಕಂಪನಿಯದ್ದು ಆಗಿತ್ತು. ಸದರಿ ದಿನ ಸದರಿ ಮೈಕ್ರೊಚೀಪನಲ್ಲಿದ್ದ ಆಡಿಯೋ ರಿಕಾರ್ಡನ್ನು ಟೈಪ ಮಾಡಿಸಿದ್ದನ್ನು ನನಗೆ ಪೋಲಿಸರು ತೋರಿಸಿದ್ದು ಅದನ್ನು ನಾನು ಪೂರ್ತಿಯಾಗಿ ಓದಿರಲಿಲ್ಲ. ದಿಃ 21.05.2018 ರಂದು ಪೋಲಿಸರು 1 ನೇ ಆರೋಪಿಯ ನಮೂನೆ ಧ್ವನಿಯನ್ನು ಅವರಿಂದ ಪಡೆದು ಅದನ್ನು ಸಿಡಿಗೆ ವರ್ಗಾಯಿಸಿಕೊಂಡರು. ಎಂಓ 5 ರಲ್ಲಿನ ಧ್ವನಿಯನ್ನು ಗುರುತಿಸುವ ವ್ಯಕ್ತಿಗಳನ್ನು ಸದರಿ ದಿನ ಪೋಲಿಸರು ಸದರಿ ಸ್ಥಳದಲ್ಲಿ ಕರೆಸಿದ್ದರೊ ಇಲ್ಲವೂ ನನಗೆ ನೆನಪಿಲ್ಲ. ಸದರಿ ಎಂಓ 5 ರಲ್ಲಿನ ಧ್ವನಿ 1 ನೇ ಆರೋಪಿಯ ಧ್ವನಿ ಹಾಗೂ ಅವರ ಜೊತೆ ಮಾತನಾಡಿದ ಇನ್ನೊರ್ವ ವ್ಯಕ್ತಿಯ ಧ್ವನಿ ಯಾರದ್ದು ಎಂದು ಸದರಿ ಎಂಓ 5 ಸಿಡಿಗಳನ್ನು ತಯಾರಿಸುವ ಕಾಲಕ್ಕೆ ಯಾರು ಗುರುತಿಸಿದರು ಎಂದು ನನಗೆ ನೆನಪಿಲ್ಲ. ಸದರಿ ಎಂಓ 5 ರಲ್ಲಿ ಒಂದು ಕಡೆಯಿಂದ ಮಾತನಾಡಿದ ವ್ಯಕ್ತಿ ಎಷ್ಟು ಹೊತ್ತು ಮಾತನಾಡಿದ್ದಾರೇ ಅದಕ್ಕೆ ಇನ್ನೊಂದು ಕಡೆಯಿಂದ ಮಾತನಾಡಿದ ವ್ಯಕ್ತಿ ಎಷ್ಟು ಹೊತ್ತು ಮಾತನಾಡಿದ್ದಾರೆ ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. ನಿಪಿ.6 ಪಂಚನಾಮೆಯನ್ನು ಪೋಲಿಸರು ಹೇಳಿದ ಹಾಗೇ ತಯಾರಿಸಲಾಗಿದೆ. ನಿಪಿ.6 ಪಂಚನಾಮೆಯನ್ನು ನಾನು ಓದಿ ನೊಡಿರುತ್ತೇನೆ. ಸದರಿ ಪಂಚನಾಮೆಯಲ್ಲಿ ಯಾವ ವ್ಯಕ್ತಿ ಯಾರ ಜೊತೆ ಮಾತನಾಡಿದರುತ್ತಾರೆ ಎಂದು ಬರೆಯಲಾಗಿದೆ. ಸದರಿ ಪಂಚನಾಮೆಯಲ್ಲಿ ಯಾವ ನಂಬರನಿಂದ ಯಾವ ನಂಬರಗೆ ಕರೆ ಮಾಡಲಾಗಿತ್ತು ಎಂದು ಬರೆಯಲಾಗಿದೆ.

2. ಈಗ ಸಾಕ್ಷಿಗೆ ಎಂಓ 6 ಸಿಡಿಯನ್ನು ಮಾನ್ಯ ಸಸಅ ರವರ ಲ್ಯಾಪಟಾಪನಲ್ಲಿ ಹಾಕಿ ತೊರಿಸಿ ಸದರಿ ಸಿಡಿ ಯ ಕ್ರಿಯೆಟೆಡ್ ದಿಃ 25.05.2018 ಎಂದು ಹಾಗೂ ಅದರ ಮೊಡಿಫೈ ಮಾಡಿದ ದಿಃ 25.05.2018 ಎಂದು ತೊರಿಸುತ್ತಿದ್ದೆ ಎಂದರೆ ಸರಿ. ಅದೇ ರೀತಿ ಈಗ ಸಾಕ್ಷಿಗೆ ಎಂಓ 7 ಸಿಡಿಯನ್ನು ಲ್ಯಾಪಟಾಪನಲ್ಲಿ ಹಾಕಿ ತೊರಿಸಿ ಸದರಿ ಸಿಡಿಯ ಕ್ರಿಯೆಟೆಡ್ ದಿಃ 25.05.2018 ಸಮಯ ಮದ್ಯಾಹ್ನ 4.36 ಎಂದು ಹಾಗೂ ಅದರ ಮೊಡಿಫೈ ಮಾಡಿದ ದಿಃ 25.05.2018 ಸಮಯ ಮದ್ಯಾಹ್ನ 4.36 ಎಂದು ತೊರಿಸುತ್ತಿದ್ದೆ ಎಂದರೆ ಸರಿ. ಅದೇ ರೀತಿ ಈಗ ಸಾಕ್ಷಿಗೆ ಎಂಓ 8 ಸಿಡಿಯನ್ನು ಲ್ಯಾಪಟಾಪನಲ್ಲಿ ಹಾಕಿ

ತೊರಿಸಿ ಸದರಿ ಸಿಡಿ ಯ ಕ್ರಿಯೆಟೆಡ್ ದಿಃ 25.05.2018 ಸಮಯ 4.37 ಎಂದು ಹಾಗೂ ಅದರ ಮೊಡಿಫೈ ಮಾಡಿದ ದಿಃ 25.05.2018 ಸಮಯ 4.37 ಎಂದು ತೊರಿಸುತ್ತಿದ್ದೆ ಎಂದರೆ ಸರಿ. ನನ್ನ ಸಮಕ್ಷಮ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೇ ನಿಪಿ.6 ಮತ್ತು 10 ರಂತೆ ಯಾವುದೇ ಪಂಚನಾಮೆಯನ್ನು ಪೋಲಿಸರು ಮಾಡಿಲ್ಲ ಎಂದರೆ ಸರಿಯಲ್ಲ. ಹಾಗೂ ಎಂಓ6 ರಿಂದ 8 ಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಹಾಗೂ ಸದರಿ ಸಮಯದಲ್ಲಿ ಯಾವುದೇ ಪೊಟೊ ಗಳನ್ನು ಸಹ ತೆಗೆದಿಲ್ಲ ಎಂದರೆ ಸರಿಯಲ್ಲ. ಹಾಗೂ ನನ್ನ ಸಮಕ್ಷಮ 1 ನೇ ಆರೋಪಿ ಯಾವುದೇ ನಮೂನೆ ಧ್ವನಿಯನ್ನು ಪೋಲಿಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಈಗ ಸಾಕ್ಷಿಗೆ ಎಂಓ5 ಮೈಕ್ರೊಚೀಪನ್ನು ಲಾಪಟಾಪಗೆ ಅಳವಡಿಸಿ ಚಾಲನೆ ಮಾಡಿ ತೊರಿಸಿ ಸದರಿ ಎಂಓ5 ಮೈಕ್ರೊಚೀಪ ಸಹ ದಿಃ 25.05.2018 ಸಮಯ ಮದ್ಯಾಹ್ನ 3.56 ರಂದು ಕ್ರಿಯಟ್ ಮಾಡಲಾಗಿದೆ ಎಂದು ತೊರಿಸುತ್ತಿದ್ದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

( ಅಮೊಲ್ ಜಯಕುಮಾರ ಹಿರಿಕುಡೆ.)
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.